ನನ್ ಕೈಲಾಗಲ್ಲ ಸಾರ್... ಅಂದೆ.'

ತಿಂಗ್ಳಾನುಗಟ್ಟಲೆ ಹೀಗೇ ಕಳೀತು. ಇದೊಂದೇ ಅಲ್ಲ, ಏಳೇಂಟು ಫ್ಯಾಕ್ಟ್ರಿ ಕತೇನೂ ಇಷ್ಟೆ. ಇವ್ರು ಬಂದು ಯೂನಿಯನ್ ಕಟ್ಲಿಲ್ಲ. ಆ ಟೈಮಿಗೆ ಕುಮಾರ್ ಸಿಕ್ಕಿದ್ದ ಒಂದೆರಡು ಸಾರಿ... ಫ್ಯಾಕ್ಟರಿ ಕತೆ ತದೇಕವಾಗಿ ಕೇಳಿಸಿಕೊಂಡಿದ್ದ. ಸಣ್ಣಪುಟ್ಟ ಬದಲಾವಣೆ ಆದ್ರೂ ಮಾಡೋಕೆ ಆಗುತ್ತಾ? ಕ್ಯಾಂಟೀನು, ಹೆಲ್ತು ಅಂತೆಲ್ಲಾ ತಲೆ ಕೆಡಿಸಿಕೊಂಡಿದ್ದ. ಆದರೆ ಅವನೋ ತಲೆಮರೆಸಿ ಓಡಾಡ್ತಿದ್ದ ರಾಜ್ಯಭ್ರಷ್ಟ ರಾಜಕುಮಾರ. ಅವನೇನು ಕೆಲಸ ಮಾಡ್ತಿದಾನೆ ಅಂತ ಗೊತ್ತಿತ್ತು ನಂಗೆ.'



ನಾನೇನು ಹೇಳಲಿಲ್ಲ. ಒಂದಷ್ಟು ವಿರಾಮ ಬೇಕು ಅನ್ನೋ ತರ ಮಧು ಸುಮ್ಮನಾದ...

ಆಮೇಲೆ, 'ನನ್ನ ಕೇಸು ಆಗಿದ್ದು ಆವಾಗಲೇ... ಅದೇನೋ ಕನ್ಸೈನ್‌ಮೆಂಟು ಹೊರಗೆ ಮಾರಿ ಸಿಕ್ಕಾಕೊಂಡಿದ್ದಾಯ್ತು. ನನ್ನ ಸುಪೀರಿಯರ್ ಒಬ್ಬ ಇದ್ದ. ಈ ಪ್ಲಾಂಟ್‌ನ ಜನರಲ್ ಮ್ಯಾನೇಜರ್‌ನ ಭಾವಮೈದ. ಅವಂದೇ ಕೆಲಸ ಅದು. ಹೆಡ್ಡಾಫೀಸಿಗೆ ಏನೋ ವಾಸನೆ ಸಿಕ್ಕಿ ಕಣ್ಣಿಟ್ಟು ಟ್ರಾಪ್ ಮಾಡಿದ್ರು. ಆದರೆ ನನ್ ಮೂಲಕ ಅದು ಸಾಗಣಿಕೆ ಆಗೋದು, ದಾಖಲೇಲಿ ನಾನೇ ಹೊಣೆ... ಅವನ್ನ ಜನರಲ್ ಮ್ಯಾನೇಜರ್ ಬಚಾವ್ ಮಾಡ್ದ. ನಾನು ಸಿಕ್ಕಾಕೊಂಡೆ. ಪೋಲೀಸ್ ಕಂಪ್ಲೇಂಟ್ ಆಗಿ ಪೇಪರಲ್ಲೆಲ್ಲಾ ಬಂತು ಕಣೋ... ಡಿಸ್‌ಮಿಸ್ಸೂ ಮಾಡಿದ್ರು... ಆ ಕೇಸಲ್ಲಿ ಮಸಿ ಅಂಟ್ತು ನೋಡು... ಎಲ್ಲೂ ಕೆಲಸ ಸಿಗ್ಲಿಲ್ಲ. ಹೋಗಲಿ ಈ ಪಾರ್ಟಿಯೋರು ಸಂಘದೋರು ನನ್ನ ಮಾತಾಡಿಸಲೂ ಇಲ್ಲ. ಪುಣ್ಯಕ್ಕೆ ಪೋಲೀಸ್ ಕೇಸ್ ವಿತ್‌ಡ್ರಾ ಆಗಿ ಬಚಾವಾದೆ.

ಆ ಟೈಮಿಗೆ ಮದುವೆ ಬೇರೆ ಆಗಿದ್ದೆ. ಮಕ್ಳು ಚಿಕ್ಕೋವು... ಹೊಟ್ಟೆ ಹೊರೆಯೋಕೆ ಏನೇನೋ ಕೆಲಸ ಮಾಡ್ದೆ. ಈ ಕೇಸು ಊರಿಗೆಲ್ಲಾ ಗೊತ್ತಿತ್ತಲ್ಲಾ...'

ಆ ಟೈಮಲ್ಲಿ ಕುಮಾರ್ ಮತ್ತೆ ಸಿಕ್ಕಿದ್ದ. 'ಇಲ್ಲಿ ಬಂದು ಏನಾದ್ರೂ ಮಾಡೋ ಮಾರಾಯಾ...' ಎಂದು ದುಂಬಾಲು ಬಿದ್ದಿದ್ದೆ. ಅವನೋ ಕರುಣೆಯ ಸಮುದ್ರ ಕಣೋ. ಮನೆಗೂ ಬಂದಿದ್ದ. ನನ್ ಹೆಂಡ್ತೀಗೆ ಧೈರ್ಯ ತುಂಬಿದ್ದು ಅವನೇ. ಅದೇನೋ ಗುಣುಗುಣು ಮಾತಾಡೋರಪ್ಪಾ ಅಡುಗೆಮನೇಲಿ. ಅವನು ಹೋದ ಮೇಲೆ ಇವ್ಳು ಗೆಲುವಾಗಿರೋಳು. ಒಂದೆರಡು ಬಾರಿ ಸ್ವಲ್ಪ ಕಾಸೂ ಕೊಟ್ಟಿದ್ದ.

ಅವನಿಗೆ ಪರಿಚಯ ಇರೋ ಯಾರಲ್ಲೋ ಹೇಳಿ ಲೈನ್ ಸೇಲ್ ಏಜೆನ್ಸೀನೂ ಕೊಡಿಸಿದ್ದ.

ಕೃಷ್ಣಾನೂ ಸಿಗೋನು. ಅವನೋ ದೂರ್ವಾಸ. ಕನ್ನಡದ ಎಲ್ಲಾ ಸೊಂಟದ ಕೆಳಗಿನ ಪದಗಳನ್ನೂ ಈ ಪಾರ್ಟಿ ಸಂಘಗಳ ಲೀಡರ್‌ಗಳ ಬಗ್ಗೆ ಉಪಯೋಗಿಸಿ ಉಗಿದು ವಾಪಾಸು ಹೋಗೋನು. ಏನು ಮಾಡೋಕಾಗುತ್ತೆ. ಪಾರ್ಟಿ, ಸಂಘ ಎಲ್ಲಾ ಶ್ರಿಂಕಾಗ್ತಾ ಬಂತು ಕಣೋ ನಮ್ಮ ಕಣ್ಣೆದುರೇ... ಕುಮಾರಂಗೆ ಏನಾಯ್ತು ಗೊತ್ತು ತಾನೇ? ಹಟ ಕಣೋ, ಹಟ. ಸಾಯೋ ಹಟ ಅವನಿಗೆ.'

ಮಧು ಮಾತು ನಿಲ್ಲಿಸಿ ಬಿಕ್ಕಿ ಬಿಕ್ಕಿ ಅಳತೊಡಗಿದ.

ನಾನು ಮಾತಾಡದೇ ಅವನ ಬೆನ್ನು ಸವರಿದೆ.

'ನಿನ್ನ ಕೇಸ್ ಬಗ್ಗೆ ಕುಮಾರಂಗೆ ಫ್ಯಾಕ್ಟ್ ಗೊತ್ತಿತ್ತು ತಾನೇ?' ಎಂದು ಕೇಳಿದೆ.

ಮಧು ಅದುರಿಬಿದ್ದು, ನನ್ನನ್ನೇ ನೋಡಿ, 'ಹ್ಞು... ಗೊತ್ತಿತ್ತು ಕಣೋ' ಎಂದವನು,

'ನಿಜಾ ಹೇಳಲಾ ಕೇಪಿ, ಆ ಕೇಸಲ್ಲಿ ಆ ಜನರಲ್ ಮ್ಯಾನೇಜರ್ ಭಾವಮೈದ ಕದ್ದು ಮಾರಿ ಕಾಸು ಮಾಡ್ಕೊತಿದ್ದ ನಿಜ. ಆದರೆ ಅವನ ಕಳ್ಳಾಟ ನೋಡಿ ನಾನೂ ಬ್ಲಾಕ್‌ಮೈಲ್ ಮಾಡಿದ್ದೆ ಕಣೋ... ನನಗೂ ಒಂದಷ್ಟು ಕಮಿಷನ್ ಬಂದಿತ್ತು. ಐ ವಾಸ್ ನಾಟ್ ಆಲ್ ದಾಟ್ ಇನ್ನೋಸೆಂಟ್...' ಎಂದು ಹೇಳಿ ಮಧು ಹಣೆ ಚಚ್ಚಿಕೊಂಡ.

'ಕುಮಾರ್‌ಗೆ ಗೊತ್ತಿತ್ತಾ?' ಎಂದು ಕೇಳಿದೆ.